ಇಂಜನಿಯರಿಂಗ್?' ಎಂದು ಹಾರಾಡಿದಾಗ 'ಹೋಗಲಿ ಬಿಡಿ ಅತ್ತೆ ಅವಳ ಇಷ್ಟಕ್ಕೆ ಏಕೆ ಅಡ್ಡ ಬರ್ತೀರಾ' ಎಂದು ಹುರಿದುಂಬಿಸಿದ ರವಿಯನ್ನು ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳುತ್ತೇನೆ. ನನ್ನ ಪಾಸು, ಪ್ರಥಮ ದರ್ಜೆ, ರ್‍ಯಾಂಕುಗಳನ್ನು ನನಗಿಂತ ಹೆಚ್ಚು ಖುಷಿಯಲ್ಲಿ ಸಿಹಿಹಂಚಿ ಹಂಚಿಕೊಂಡಿದ್ದು, ನಾನು ಅವನದೇ ಕಾರ್ಖಾನೆಗೆ ಅವನ ಮೇಲಿನ ಹುದ್ದೆಗೆ ಸೇರಿದರೂ ಅಸೂಯೆ ಪಡದಿದ್ದದ್ದು. ಕೆಲವೊಮ್ಮೆ ಕೆಲಸದ ರಭಸದಲ್ಲಿ ನಾನು ಅವನನ್ನು ಉಪೇಕ್ಷಿಸಿದರೂ ಅರ್ಥ ಮಾಡಿಕೊಂಡದ್ದು ಎಲ್ಲಾ ನೆನೆಯುತ್ತೇನೆ. ನನಗೆಂದು ಹೆಸರಿಟ್ಟದ್ದಾಯಿತು. ಅದರಾಚೆ ಅವನು ಯಾವ ಹೆಣ್ಣನ್ನೂ ಮತ್ತೆ ನೋಡಿದ್ದಿಲ್ಲ – ನಿಶ್ಚಿತಾರ್ಥ ಆದಾಗಲಿಂದ 'ಶಶಿ ಎಂದಿದ್ದರೂ ನನ್ನವಳು' ಎಂದು ನಿಶ್ಚಿಂತ. ಅವನ ಸರಳತೆಯ ಮೆಚ್ಚಲು ಬಯಸುತ್ತೇನೆ. ನನ್ನ ಬದುಕನ್ನೇ ಬಗೆ ಬಗೆದು ಏನನ್ನೋ ಹುಡುಕುತ್ತೇನೆ.

ಒಮ್ಮೊಮ್ಮೆ ಅನ್ನಿಸುವುದುಂಟು. ಈ ಎಲ್ಲ ನನ್ನ ಹುದ್ದೆ, ಬಡ್ತಿಗಳ ಹೋರಾಟ, ಸ್ಪರ್ಧೆಯ ವೇಗ, ಒದ್ದಾಟ, ಮಹತ್ವಾಕಾಂಕ್ಷೆಗಳು, ಹಗಲಿರುಳ ಪರಿಶ್ರಮಗಳು– ಇವೆಲ್ಲ ನಿಜಕ್ಕೂ ಏತಕ್ಕಾಗಿ? ಬಹುಶಃ ರವಿಯ ಶಾಂತ ಸ್ವಭಾವದಲ್ಲಿ, ಇರುವುದರಲ್ಲೇ ಸದಾ ತೃಪ್ತನಾಗುವ, ಹೆಚ್ಚಿನದಕ್ಕೆ ಕೈ ಚಾಚದೆ, ಹೆಚ್ಚು ಕೆಲಸ ಕನಸುಗಳನ್ನ ಅಂಟಿಸಿಕೊಳ್ಳದೆ ದಿನ ಬೆಳಗು ಸಂಜೆ ರಾತ್ರಿಗಳ ಆರಾಮವಾಗಿ ಕಳೆದುಬಿಡುವ ಅವನ ಜೀವನ ಶೈಲಿಯಲ್ಲಿ ಹೊಸ ತತ್ತ್ವವೊಂದಿರಬಹುದು. ತನ್ನದೇ ಪ್ರತ್ಯೇಕ ಪ್ರಪಂಚದಲ್ಲಿ, ಊಟ, ತಿಂಡಿ, ಹರಟೆ ನಿದ್ದೆಗಳ ಪುಟ್ಟ ಜಗತ್ತಿನಲ್ಲಿ ಅವ ಸುಖಿ. ನಾನು ಅವನ ಈ ಬದಲಿಲ್ಲದ ಬದುಕಿಗೆ ಶಾಮೀಲಾಗಲು ಏಕೆ ಸಿದ್ಧವಿಲ್ಲ? ನನಗೆ ಹೊಸತನದ ಅನ್ವೇಷಣೆ ಇದೆ. ಸಾಧನೆಯ ಕುದುರೆಯೇರುವ ನಾಗಾಲೋಟದ ರೋಮಾಂಚನದ ಹುಚ್ಚಿದೆ. ರವಿ ನಾನು ಹೇಗೆ ಹೇಳಲಿ ನಿನ್ನ ಸಂಯಮ ಸಾವಧಾನ ನನ್ನನಿಂದು ನಾಟುತ್ತಿಲ್ಲ. ಏನೊಂದು ಆಗದ ನಿನ್ನ ಬದುಕಿನ ವಿವಿಕ್ತತೆಗೆ, ಏಕತಾನಕ್ಕೆ ನಾನು ಸ್ಪಂದಿಸುತ್ತಿಲ್ಲ.

ನಿನ್ನ ಬದುಕಿನ ಸರಳತೆಗೆ ಮಾರು ಹೋಗಲಾರದ ನನ್ನ ಬದುಕಿನ ಸಂಕೀರ್ಣತೆಯ ದೂಷಿಸಲೆ? ಸಂಜೆಗಳನ್ನು ಸೋಮಾರಿ ಕಟ್ಟೆಯಲ್ಲಿ ಸೂರ್ಯಾಸ್ತ ನೋಡುತ್ತಾ ಕಳೆದು ಬಿಡುವ ನಿನ್ನ ಬದುಕಿನ ಬಿಡುವಿನ ಬಗ್ಗೆ ನನಗೆ ಮತ್ಸರವೆ, ತಾತ್ಸಾರವೇ, ಉದಾಸೀನವೆ, ತಿರಸ್ಕಾರವೆ?

ಆಫೀಸಿನಲ್ಲಿ ನಾನು ರವಿಯೊಡನೆ ನೇರ ಮಾತನಾಡುವುದೂ ಅಪರೂಪವಿತ್ತು. ದಿನವೆಲ್ಲ ಬಿಡುವಿಲ್ಲದ ಕೆಲಸ. ಕೆಲಸಕ್ಕೆ ಬಾರದ ಮೀಟಿಂಗ್‌ಗಳು, ಕಾನ್‌ಫರೆನ್ಸ್‌ಗಳು. ಕೆಲವೊಮ್ಮೆ ದಿಢೀರನೆ ಬಾಂಬೆ, ಮದ್ರಾಸ್ ಎಂದು ಬಿಜಿಯಾಗಿ ಸುತ್ತುವುದೂ ಇತ್ತು. ಅದರಾಚೆ ಸಂಜೆ ಕೂಡಾ ಏನಾದರೂ ಸಂಘ ಸಂಸ್ಥೆಯ ಕೆಲಸ ಅಂಟಿಸಿಕೊಂಡವಳು ನಾನು. ರವಿ ಮಾತ್ರ ತನಗೆ ಕೊಟ್ಟ ಕೆಲಸವನ್ನಷ್ಟು ಅಚ್ಚುಕಟ್ಟಾಗಿ ಮುಗಿಸಿ ನಂತರ ಹಾಯಾಗಿ ಜೊತೆಯವರೊಡನೆ ಹರಟುತ್ತಲೋ, ಕ್ಯಾಂಟೀನಿನ ಕಾಫಿ ಹೀರುತ್ತಲೋ ಕಳೆದು ಬಿಡುತ್ತಿದ್ದ. ನನಗೊಂದು ಬಗೆಯ ಅಸೂಯೆ, ಕೋಪ ಒಟ್ಟಿಗೇ ಏರುತ್ತಿತ್ತು. ಎಷ್ಟೊಂದು ಸಮಯ ಇದೆ. ಏನಾದರೂ ಓದಿಕೊಳ್ಳಬಾರದಾ? ತನ್ನ ಕೆಲಸದಲ್ಲೇ ಮತ್ತಷ್ಟು ಕಲಿಯಬಾರದಾ? ಮನೆಯಲ್ಲೆ ಪಿ.ಸಿ. ಇಟ್ಟುಕೊಂಡಿದ್ದಾನೆ, ವೀಡಿಯೋ ಆಟಗಳ ಆಡುವುದು ಬಿಟ್ಟು ಅವ ಅದರ ಮೇಲೆ ಮಾಡೋದೇನು. ಒಂದಿಷ್ಟು 'ಪ್ರೋಗ್ರಾಮಿಂಗ್' ಕಲಿಯಬಾರದಾ? ನನ್ನೊಳಗೇ ಎಂಥದ್ದೋ ಆಕ್ರೋಶ ಕುದಿದೆದ್ದರೂ, ಅದಕ್ಕೆಲ್ಲ ಮಾತು ಕೊಡಲಾರದೆ ಒದ್ದಾಡುತ್ತಿದ್ದೆ.

ಎಷ್ಟೋ ಬಾರಿ ಯೋಚಿಸಿದ್ದುಂಟು–